ಗಂಡ ಹೆಂಡತಿ ಇಲ್ಲಿ ಹರಳು ಹುರಿದಂತೆ ತಮಿಳು ಮಾತನಾಡುವುದನ್ನೂ ಕಲಿತಿದ್ದಾರೆ.

ಚಿಟ್ಟಿಯಪ್ಪ ಗೆಳೆಯನ ಟೀ ಎಸ್ಟೇಟಿಗೆ ಹೋಗುವ ಹೊತ್ತಿಗೆ ಮಧ್ಯಾಹ್ನವಾಗಿತ್ತು. ಪ್ರಗತ್ ಚಿಟ್ಟಿಯಪ್ಪ ಹೇಳಿದ್ದರೆಂದು ಕಾಣುತ್ತೆ. ಹೀಗಾಗಿ ಭೋಜನ ಸಿದ್ಧವಾಗಿತ್ತು. ಊಟ ಮುಗಿಸಿ ಗ್ರೇಟರ್ ಹಾರ್ನ್ ಬಿಲ್ ನೋಡಲು ಅನೇಕ ಕಂದಕಗಳ ರಸ್ತೆಯಲ್ಲಿ ಹೋಗಬೇಕಿತ್ತು. ಸೇತುವೆಯಿಲ್ಲದ ಅನೇಕ ಹಳ್ಳ ಕೊಳ್ಳಗಳ ಹಾರಬೇಕಿತ್ತು. “ಜೀಪು ಬಿಟ್ಟು ಬೇರೆ ವಾಹನದಲ್ಲಿ ಅಲ್ಲಿಗೆ ಹೋಗಲಾಗದು. ನನ್ನ ಜೀಪು ಬೇರೆ ರಿಪೇರಿಗೆ ಹೋಗಿದೆ ಏನು ಮಾಡುವುದೆಂದು?” ಚಿಟ್ಟಿಯಪ್ಪ ಗೆಳೆಯ ಚಿಂತೆಗೆ ಬಿದ್ದರು.

ನಾನು ಆಗಿದ್ದಾಗಲಿ ನನ್ನ ಕಾರಲ್ಲೇ ಹೋಗೋಣ ಎಂದೆ. ಎಲ್ಲರೂ ನನ್ನ ಮುಖವನ್ನು ಒಮ್ಮೆ ಗಲಿಬಿಲಿಯಲ್ಲಿ ನೋಡಿದರು. ಹೆಂಡತಿಗಿಂತ ಹೆಚ್ಚಾಗಿ ಪ್ರೀತಿಸುವ ಕಾರು ಎಕ್ಕುಟ್ಟಿ ಹೋದರೂ ಚಿಂತೆಯಿಲ್ಲ ಎಂಬ ನನ್ನ ನಿರ್ಧಾರ ಅವರಿಗೆಲ್ಲಾ ದಿಗ್ಭ್ರಮೆ ಮೂಡಿಸಿರಬಹುದು. ದಾರಿ ಚೆನ್ನಾಗಿ ಬಲ್ಲ ವೇದಾ ಗೆಳೆಯ ಗಾಡಿ ಓಡಿಸುವುದೆಂದು ತೀರ್ಮಾನಿಸಿ ಕುಳಿತೆ. ಮುಂದೆ ಒರಟು ದಾರಿಯಲ್ಲಿ ಕಾರು ಸೊಯ್ಯನೆ ಜಾರುವಾಗ, ಬಂಡೆಗಲ್ಲು ಹತ್ತಲಾಗದೆ ತಿಣುಕುವಾಗ, ಧಡ್ ಎಂದು ಬಾನೆಟ್ ಕೆಳಗಿಂದ ಶಬ್ದ ಹೊರಟಾಗ, ಏರು ದಾರಿಯಲ್ಲಿ ಉಸಿರುಗಟ್ಟಿ ನಿಂತು ಹಿಂದಕ್ಕೆ ಚಲಿಸುವಾಗ ಎದೆ ಧಸಕ್ ಎನ್ನುತ್ತಿತ್ತು. “ಯಾವುದಕ್ಕೂ ಕಿಟಕಿ ಬಾಗಿಲು ಹಾಕಿಕೊಳ್ಳಿ. ಇಲ್ಲೊಂದು ಮನುಷ್ಯರ ಮೇಲೆ ಧಾಳಿ ನಡೆಸುವ ಕುಖ್ಯಾತ ಕರಡಿ ಇದೆ. ಈಗಾಗಲೇ ಇಬ್ಬರನ್ನು ಪರಲೋಕಕ್ಕೆ ಕಳಿಸಿದೆ. ಯಾವ ಮಾಯೆಯಲ್ಲಿ ಎಲ್ಲಿಂದ ಪ್ರತ್ಯಕ್ಷವಾಗುವುದೋ! ಹೇಳುವುದು ಕಷ್ಟ” ಎಂದು ಚಾಲಕ ಗೆಳೆಯ ಹೇಳಿದಾಗ ಗಂಟಲು ಒಣಗಿತು.

ಒಂದು ಗಂಟೆಯ ಕಠಿಣ ಪಯಣ ಮುಗಿಸಿ ಮತ್ತೊಂದು ಬೆಟ್ಟದ ನೆತ್ತಿಗೆ ಬಂದೆವು. ಮುಂದಿನ ವಿಶಾಲ ಕಣಿವೆಯಲ್ಲಿ ಅತ್ತಿಂದಿತ್ತ ಮಲಬಾರ್ ಗ್ರೇಟ್ ಹಾರನ್ ಬಿಲ್ ಹಕ್ಕಿಗಳು ಹಾರುತ್ತಿದ್ದವು. ಮುಂದೊಂದು ಹಣ್ಣಿನ ಮರವಿತ್ತು. ಎಲ್ಲವೂ ಅಲ್ಲಿಗೆ ಲಗ್ಗೆ ಇಟ್ಟಿದ್ದವು. ತಮ್ಮ ಸಂಗಾತಿಗೆ ಮತ್ತು ಮರಿಗಳಿಗೆ ಹಣ್ಣು ಸಂಗ್ರಹಿಸಲು ಬಂದ ಮಂಗಟ್ಟೆಗಳು ನಿರಂತರವಾಗಿ ಹಣ್ಣನ್ನು ನುಂಗುತ್ತಿದ್ದವು. ಅವನತಿಯ ಸಂತತಿಯ ಹಾದಿಯಲ್ಲಿರುವ ಈ ಖಗಗಳು ಈ ಪ್ರಮಾಣದಲ್ಲಿ ಇಲ್ಲಿರುವುದು ತೀರಾ ವಿಶೇಷ. ಹಾಗಾದರೆ ಇಲ್ಲಿನ ಕಾಡು ದಟ್ಟವಾಗಿದೆ ಮತ್ತು ಹವಾಮಾನ ಶುದ್ಧವಾಗಿದೆ ಎಂದರ್ಥ. ಎತ್ತರದ ಮರಗಳಿರುವ ಜಾಗದಲ್ಲಿ ಮತ್ತು ಜನರ ಓಡಾಟ ಹೆಚ್ಚಿರದ ಸ್ಥಳದಲ್ಲಿ ಮಾತ್ರ ಈ ಹಕ್ಕಿ ವಾಸಿಸುತ್ತದೆ. ಅವುಗಳ ಪಟ ಸಿಕ್ಕು ಮನೆಗೆ ಮರಳಿದೆವು.

ಎರಡು ದಿನ ವಾಲ್ಪರೈ ಸುತ್ತಾಡಿದ ನಾವು ಮೂರನೆಯ ದಿನ ಹೊರಟು ನಿಂತೆವು. ಆದರೆ ಮುಂದಿನ ಪಯಣ ಹಿತಕರವಾಗಿರಲಿಲ್ಲ. ಮುಂದೊಂದು ಆಘಾತ ನಮಗಾಗಿ ಕಾಯುತ್ತಿತ್ತು.

ನಮ್ಮ ಜೊತೆ ಬಂದಿದ್ದ ಪುಷ್ಪರಾಜ ಆಗಸದಲ್ಲಿ ಹಾರಾಡುವ ಡ್ರೋಣ್ ಎಂಬ ಒಂದು ಕ್ಯಾಮೆರಾ ತಂದಿದ್ದ. ಅದರಲ್ಲಿ ಪ್ರಗತ್ ಅವರ ಬೆಟ್ಟದ ಮೇಲಿನ ಬಂಗಲೆ ಎದುರು ಒಂದಿಷ್ಟು ಶೂಟಿಂಗ್ ಮಾಡಿ ಮುಗಿಸಿದ್ದೆವು. “ಇದನ್ನು ಬಳಸಲು ಲೈಸನ್ಸ್ ತಗೋಬೇಕು. ಎಲ್ಲೆಂದರಲ್ಲಿ ಬಳಸುವಂತಿಲ್ಲ. ಕಾಡಿನ ಹತ್ತಿರವಂತೂ ಇದನ್ನು ಒಯ್ಯಲೇಬಾರದು. ಯಾವನಾದರೂ ನೋಡಿದರೆ ಏನು ಗತಿ?” ಎಂದು ನಾನು ಮೊದಲೇ ಕ್ಯಾತೆ ತೆಗೆದಿದ್ದೆ. ಸೂಕ್ಷ್ಮಗಳನ್ನು ಅರ್ಥ ಮಾಡಿಕೊಳ್ಳದ ಯಾವಾಗಲೂ ಒರಟೊರಟಾಗೇ ನಡೆದುಕೊಳ್ಳುವ ಪುಷ್ಪರಾಜ ನನ್ನ ಹಿತವಚನವನ್ನು ಕಿವಿತನಕವೂ ಬಿಟ್ಟುಕೊಳ್ಳಲಿಲ್ಲ. ಮೇಲಾಗಿ ಏನಾಯಿತೋ ಏನೋ? ಗೊತ್ತಿಲ್ಲ ಅದರ ರೆಕ್ಕೆಗಳು ಒಮ್ಮೆಗೇ ಕೈ ಕೊಟ್ಟವು. ಕೆಟ್ಟು ಹೋದ ಅದನ್ನು ರಿಪೇರಿ ಮಾಡುವ ನೈಪುಣ್ಯತೆ ನಮ್ಮಲ್ಲಿ ಯಾರಿಗೂ ಇರಲಿಲ್ಲ. ಲಟಪಟ ಎಂದು ತಿರುಗಿಸಿ ನೋಡಿದ ಪುಷ್ಪ ಅದರ ಒಂದು ಬದಿ ಮುರಿದು ಹಾಕಿ “ನಿಮಗೀಗ ಸಮಾಧಾನವಾಯಿತಾ ಸರ್?” ಎಂದು ಕೆಂಗಣ್ಣು ಬಿಟ್ಟ. ಅದನ್ನು ರಿಪೇರಿ ಮಾಡುತ್ತ ಆಗಾಗ ಕಾರಿನ ಕಿಟಕಿ ಹೊರಗೆ ಹಿಡಿದು ವಿಡಿಯೋ ರೆಕಾರ್ಡಿಂಗ್ ಆಗುತ್ತಿದೆಯೇ ಎಂದು ಪರೀಕ್ಷಿಸುತ್ತಿದ್ದ.

ವಾಲ್ಪರೈ ದಾಟಿ, ಅಣ್ಣಾಮಲೈ ಕಾಡಿನ ತಿರುವುಗಳ ಮುಗಿಸಿ ಕಾರು ಓಡುತ್ತಿತ್ತು. ಅಷ್ಟರಲ್ಲೇ ಧುತ್ತನೆ ಫಾರೆಸ್ಟ್ ಚೆಕ್ ಪೋಸ್ಟ್ ಬಂದಿತು. ಕಾರನ್ನು ನಿಲ್ಲಿಸಲು ಸೂಚನೆ ಬಂತು. ವಿಷಯ ಏನೆಂದು ತಿಳಿಯಲು, ನಾನು ಹತ್ತಿರ ಹೋದಾಗ “ಎಂಟ್ರಿ ಪಾಸ್ ಎಂಗೆ”